## ಅಮರೀಶ್ ಪುರಿ ಮನೆ



ಕಳೆದ ತಿಂಗಳು ನಾನು ನನ್ನ ಸ್ನೇಹಿತೆ ಲತಾ ಜೋಶಿ ಹುಬ್ಬಳ್ಳಿಯ ಮತ್ತೊಬ್ಬ ಸ್ನೇಹಿತೆ ವಿಜಯಾ ಮನೆಗೆ ಹೋಗಿದ್ವಿ. ಎರಡು ದಿನಗಳಲ್ಲಿ ನೋಡಬೇಕಾದ ಸ್ಥಳಗಳನ್ನು ವಿಜಯ ಆಗಲೇ ನಿರ್ಧರಿಸಿಯಾಗಿತ್ತು.

ಅಂದು 'ಮೂರು ಸಾವಿರ ಮಠಕ್ಕೆ ಹೋಗೋಣ' ಎಂದು ಪರಿಚಯದ ಆಟೋ ತರಿಸಿದಳು. ಹಾಗೇ ಹೋಗುತ್ತಿದ್ದಾಗ ಒಂದು ಕಿರುದಾರಿಯ ಕಡೆ ತಿರುಗಿ, ಅಲ್ಲೊಂದು ಮನೆಯ ಕಡೆ ಬೆರಳು ತೋರಿಸಿ, 'ಅಕ್ಕಾ, ಇದು ಅಮರೀಶ್ ಪುರಿ ಮನೆ' ಅಂದಳು. ಅಲ್ಲಿ ದೊಡ್ಡದಾದ ಪಾಳುಬಿದ್ದ ಮನೆ ಕಂಡಿತು. 'ಅಯ್ಯ... ಆ ಅಮರೀಶ್ ಪುರಿ ಇಲ್ ಬಂದ್ ಯಾಕ್ ಮನೆ ತಗಳ್ತಾನೆ? ಅದೂ ಹಳೇ ಮನೆ? ಅವ್ರ ಪೂರ್ವಜರದ್ದು ಇರಬೇಕು' ಎಂದರು ಲತಾ. ನಾನೂ ಅವ್ರ ಮಾತಿಗೆ ತಲೆಯಾಡಿಸಿದೆ.

ಮೂರು ಸಾವಿರ ಮಠ ವೀಕ್ಷಿಸುತ್ತಿದ್ದಾಗ, ಎದುರಾದ ವ್ಯಕ್ತಿಯೊಬ್ಬರ ಮಾತನಾಡಿಸಿದ ವಿಜಯಾ, 'ಅಕ್ಕ.., ದಾರೀಲಿ ಬರ್ತಾ ತೋರ್ಸಿದ್ನಲ್ಲ ಮನೆ. ಅದು ಇವ್ರದ್ದು. ಇವ್ರ ಅಮರೀಶ ಪುರಿ. ನಮ್ಮತ್ತೆ ಅಕ್ಕನ ಮಗ' ಎಂದು ಪರಿಚಯಿಸಿದಳು. ನಾವಿಬ್ಬರೂ ಪರಸ್ಪರ ಮುಖ ನೋಡಿಕೊಂಡೆವು. ನಂತರ 'ನಮಸ್ಕಾರ ಸರ್. ಅದೇನು ನಿಮ್ ಹೆಸರು ಅಮರೀಶ ಪುರಿ ಅಂತ? ನಮಗೆ ಗೊತ್ತಿರೋದು ವಿಲನ್ ಅಮರೀಶ್ ಪುರಿ ಒಬ್ರೇ' ಎಂದೆವು. ಅದಕ್ಕವರು, 'ನಮ್ಮಪ್ಪಾರಿಗೆ ಅಮರೀಶ್ ಪುರಿ ಬಾಳ ಫೇವರೇಟ್. ಅದಕ್ಕ ನನಗ ಆ ಹೆಸ್ರ ಇಟ್ಟಾರ' ಎಂದಾಗ ಮತ್ತೊಮ್ಮೆ ಬೇಸ್ತು ಬೀಳೋ ಸರದಿ ನಮ್ಮದಾಗಿತ್ತು.

**ಸುಮಾ ಕಳಸಾಪುರ**

---

## ನೀವೂ ಬನ್ನಿ ಸಾರ್!



'ಅಪರಾಧ ತಡೆ ಮಾಸಾಚರಣೆ' ಹಿನ್ನೆಲೆಯಲ್ಲಿ ಪ್ರಾಂಶುಪಾಲರೊಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಅನ್ನು ಕಾಲೇಜಿಗೆ ಆಹ್ವಾನಿಸಿದ್ದರು.

ಆ ಕಾರ್ಯಕ್ರಮದ ದಿನ ಇನ್‌ಸ್ಪೆಕ್ಟರ್ ಅವರು ಕೇಸ್ ಒಂದರ ಆರೋಪಿಯನ್ನು ಬಂಧಿಸಿ ಪೊಲೀಸ್ ಜೀಪ್‌ನಲ್ಲಿ ಕೂರಿಸಿಕೊಂಡು ಸ್ಟೇಷನ್ ಕಡೆ ಹೊರಟಿದ್ದರು. ಆಗ ಕಾಲೇಜಿನ ಕಾರ್ಯಕ್ರಮ ನೆನಪಾಗಿ ಅದನ್ನು ಮುಗಿಸಿಕೊಂಡೇ ಸ್ಟೇಷನ್‌ಗೆ ಹೋದರಾಯಿತು ಎಂದು ಇನ್‌ಸ್ಪೆಕ್ಟರ್ ಅವರು ಕಾಲೇಜು ಆವರಣದಲ್ಲಿ ತಮ್ಮ ಜೀಪ್ ನಿಲ್ಲಿಸಿದರು.

ಆಗ ಅವರನ್ನು ಎದುರುಗೊಂಡು ಕಾಲೇಜಿನ ಉಪನ್ಯಾಸಕರೊಬ್ಬರು ಸ್ವಾಗತಿಸುತ್ತ ಕರೆದೊಯ್ಯಲು ಮುಂದಾದರು. ಆ ಸಬ್ ಇನ್‌ಸ್ಪೆಕ್ಟರ್, ಇತರೆ ಪೇದೆಗಳು ಮತ್ತು ಆರೋಪಿಯನ್ನು ಜೀಪ್‌ನಲ್ಲೇ ಕೂಡಲು ಹೇಳಿ ಹೊರಡಲು ಅನುವಾದರು. ಆಗ ಆ ಉಪನ್ಯಾಸಕ ' ನೀವೂ ಕೂಡಾ ಬನ್ನಿ ಸರ್' ಎಂದು ಆರೋಪಿಯನ್ನು ಕರೆಯಲು ಮುಂದಾದಾಗ, ಆ ಪೊಲೀಸ್ ಸಿಬ್ಬಂದಿ ನಗುತ್ತಾ, 'ಅಯ್ಯೋ ಅವನು ನಮ್ಮ ಸಿಬ್ಬಂದಿಯಲ್ಲ, ಆರೋಪಿ' ಎಂದು ಹೇಳಿದಾಗ ಉಪನ್ಯಾಸಕರ ಮುಖ ಕಳೆಗುಂದಿತ್ತು.

**ನಾಗರಾಜ ಮಗ್ಗದ**